# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಮುಂದುವರೆದ ಯೋಜನೆಗಳಿಗೆ 2024-25ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 05 ಬಿಪಿಇ 2024, ದಿನಾಂಕ:01-04-2024.
2. ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 02 ಟಿಎಫ್‌ಪಿ 2024, ದಿನಾಂಕ:01-04-2024.
3. ಸರ್ಕಾರದ ಆದೇಶ ಸಂಖ್ಯೆ: MWD 182 MDS 2024, ದಿನಾಂಕ:03-04-2024.
4. ಅಲ್ಪಸಂಖ್ಯಾತರ ನಿರ್ದೇಶನಾಲಯದ ಇ-ಕಛೇರಿ ಕಡತ ಸಂಖ್ಯೆ:DOM/Devp/Bud/2/2024.
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರ ಪತ್ರ ಸಂ:KSBA/GOVT/AC/02/2024-25, ದಿ:02.04.2024.

## ಪ್ರಸ್ತಾವನೆ:

2024-25ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5, ಬೇಡಿಕೆ ಸಂಖ್ಯೆ (10)ರಲ್ಲಿ ವ್ಯಕ್ತವಾದಂತೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ವಿವಿಧ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (1)ರಲ್ಲಿನ ಅಧಿಕೃತ ಜ್ಞಾಪನದಲ್ಲಿ ಆರ್ಥಿಕ ಇಲಾಖೆಯು 1ನೇ ಏಪ್ರಿಲ್ 2024 ರಿಂದ 31 ಮಾರ್ಚ್ 2025ರವರಗಿನ ಅವಧಿಯ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ರಾಜ್ಯ ವಿಧಾನ ಮಂಡಲವು ಅನುಮೋದಿಸಿರುವ ಬಗ್ಗೆ ಹಾಗೂ 2024-25ನೇ ಸಾಲಿನ ಪೂರ್ಣ ವರ್ಷಕ್ಕಾಗಿ ವೆಚ್ಚ ಮಾಡಲು ಅನುಮತಿ ನೀಡುವ ಕುರಿತು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿನ ಸರ್ಕಾರದ ಆದೇಶದಲ್ಲಿ ಆರ್ಥಿಕ ಇಲಾಖೆಯು 2024-25ನೇ ಆರ್ಥಿಕ ವರ್ಷದಲ್ಲಿ ಮುಂದುವರೆದ ಅನುಮೋದನೆಗೊಂಡಿರುವ ಯೋಜನೆಗಳಿಗೆ ಏಪ್ರಿಲ್ -2024 ರಿಂದ ಜೂನ್-2024 ರವರೆಗಿನ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿರುತ್ತದೆ.

ಮೇಲೆ ಓದಲಾದ ಕ್ರ. ಸಂ (3)ರಲ್ಲಿನ ಸರ್ಕಾರದ ಆದೇಶದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಆಯವ್ಯಯ ಅಂದಾಜಿನನ್ವಯ 2024-25ನೇ ಸಾಲಿಗೆ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರ. ಸಂ (4) ಮತ್ತು (5)ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯ ಅಧೀನ ಇಲಾಖೆಗಳು 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಆಯವ್ಯಯದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಶೇ25 ರಷ್ಟು ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

......2.

S.A

Scanned with OKEN Scanner

2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಒದಗಿಸಲಾಗಿರುವ ಆಯವ್ಯಯದಲ್ಲಿ ಏಪ್ರಿಲ್ -2024 ರಿಂದ ಜೂನ್-2024 ರವರೆಗಿನ ತ್ರೈಮಾಸಿಕ ಕಂತಿನ ಅನುದಾನವನ್ನು ಅಧೀನ ಇಲಾಖೆಗಳಿಗೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:MWD 182 MDS 2024, ದಿನಾಂಕ:05-04-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖೆ/ ನಿಗಮ/ ಮಂಡಳಿ/ ಆಯೋಗ/ ಅಕಾಡೆಮಿ/ ಸಮಿತಿಗಳಿಗೆ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಈ ಕೆಳಕಂಡ ಮುಂದುವರೆದ ಯೋಜನೆಗಳಿಗೆ ಏಪ್ರಿಲ್ -2024 ರಿಂದ ಜೂನ್-2024 ರವರೆಗಿನ ಮೊದಲನೇ ತ್ರೈಮಾಸಿಕ ಕಂತಿನ ಶೇ.25 ರಷ್ಟು ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

| | **2024-25ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಆಯವ್ಯಯದ ವಿವರ** | | | |
|---|---|---|---|---|
| **ಕ್ರ.ಸಂ** | **ಯೋಜನೆಗಳ ವಿವರ** | **ಲೆಕ್ಕ ಶೀರ್ಷಿಕೆ** | **2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)** | **2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ 1ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ)** |
| **ಅಲ್ಪಸಂಖ್ಯಾತರ ನಿರ್ದೇಶನಾಲಯ** | | | | |
| 1 | ಅಲ್ಪಸಂಖ್ಯಾತರ ನಿರ್ದೇಶಕರು. Director of Minorities | 2225-04-001-0-03 (002)(003)(004)(011) (014)(015) (020)(021) (034) (035)(041)(050) (051) (052)(053)(071) (195) | 1718.44 | 429.61 |
| 2 | ಜೈನ್, ಬೌದ್ಧ ಮತ್ತು ಸಿಖ್ ಸಮುದಾಯಗಳ ಅಭಿವೃದ್ಧಿ Development of Jain, Buddhist and Sikh Community. | 2225-04-102-0-05 (103)(117) | 4000.00 | 1000.00 |
| 3 | ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ. Incentive for Minority Students. | 2225-04-277-0-03(051) | 800.00 | 200.00 |
| 4 | ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ Training to Competitive Exams . | 2225-04-277-0-06 (059) | 1715.00 | 428.75 |

.......3

S.A

Scanned with OKEN Scanner

| ಕ್ರ. ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) | 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ 1ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 5 | ಮದರಸಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕಾರ್ಯಕ್ರಮ ಸಹಾಯಾನುದಾನ-ಸಾಮಾನ್ಯ<br>Providing Quality Education in Madarasa. Grants-in-Aid -General. | 2225-04-277-0-07(103) | 500.00 | 125.00 |
| 6 | ಅಲ್ಪಸಂಖ್ಯಾತರಿಗಾಗಿ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ.<br>Scolarship for Minorities and fees re-imbursement. | 2225-04-277-0-04 (051)(177) | 19000.00 | 4750.00 |
| 7 | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ.<br>Vidyasiri Schemes for Minorities Students. | 2225-04-277-0-05(059) | 2499.00 | 624.75 |
| 8 | ಮೌಲಾನ ಆಜಾದ್ ಶಾಲೆಗಳ ನಿರ್ವಹಣೆ.<br>Maintenance of Moulana Azad Schools. | 2225-04-277-0-09 (002)(003)(004)(011) (014) (020)(021) (034) (041)(052) (059)(071)(221) | 9622.68 | 2405.67 |
| 9 | ಅಲ್ಪಸಂಖ್ಯಾತರ ವಸತಿ ಶಾಲೆಗಳು<br>Minorities Residential Schools | 2225-04-277-0-10 (002)(003)(004)(011) (014) (020)(021) (034) (041) (051) (052) (059)(071) (133)(221) | 36396.00 | 9099.00 |
| | | | 76251.12 | 19062.78 |
| | **ಕರ್ನಾಟಕ ರಾಜ್ಯ ವಕ್ಫ್ ಮಂಡಳಿ** | | | |
| 1 | ಕರ್ನಾಟಕ ರಾಜ್ಯ ವಕ್ಫ್ ಮಂಡಳಿ<br>Karnataka state Wakf Board | 2225-04-001-0-02 (101)(103)(115)(118) | 1897.58 | 474.39 |
| 2 | ವಕ್ಫ್ ಸಂಸ್ಥೆಗಳಲ್ಲಿನ ಪೇಶ್ ಇಮಾಮ್ ಮತ್ತು ಮೌಜನ್ನುಳ ಸಂಭಾವನೆ.<br>Remuneration to Pesh Imam and Mouzan of Wakf Institutions. | 2225-04-102-0-11 (015) | 8368.00 | 2092.00 |

......4

S.A

Scanned with OKEN Scanner

| ಕ್ರ. ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) | 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ 1ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 3 | ಕರ್ನಾಟಕ ರಾಜ್ಯ ವಕ್ಫ್ ಆಸ್ತಿಗಳ ಸಂರಕ್ಷಣೆ. Protection of Wakf Properties | 2225-04-102-0-03 (059) | 5000.00 | 1250.00 |
| 4 | ಅಲ್ಪಸಂಖ್ಯಾತರ ಧಾರ್ಮಿಕ ಸಂಸ್ಥೆಗಳಿಗೆ ತಸ್ತೀಕ್ ಮತ್ತು ವರ್ಷಾಸನ. Annual allowance and Thasdik to Minority religious institutions. | 2225-04-102-0-09(100) | 520.80 | 130.20 |
| | | ಒಟ್ಟು | **15786.38** | **3946.59** |
| | **ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ** | | | |
| 1 | ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ವೇತನ Grants for Karnataka State Minorities Commission | 2225-04-001-0-01 (101) (103) (115) | 238.04 | 59.51 |
| | **ಕರ್ನಾಟಕ ಉರ್ದು ಅಕಾಡೆಮಿ** | | | |
| 1 | ಕರ್ನಾಟಕ ಉರ್ದು ಅಕಾಡೆಮಿ Karnataka Urdu Academy | 2225-04-277-0-08 (103) | 150.00 | 37.50 |

**ಘೋಷ್ವಾರೆ**

| ಕ್ರ. ಸಂ. | ಇಲಾಖೆ | 2024-25ನೇ ಸಾಲಿನಲ್ಲಿ ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) | 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ 1ನೇ ಕಂತಿನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಅಲ್ಪಸಂಖ್ಯಾತರ ನಿರ್ದೇಶನಾಲಯ | 76251.12 | 19062.78 |
| 2 | ಕರ್ನಾಟಕ ರಾಜ್ಯ ವಕ್ಫ್ ಮಂಡಳಿ | 15786.38 | 3946.59 |
| 3 | ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ | 238.04 | 59.51 |
| 4 | ಕರ್ನಾಟಕ ಉರ್ದು ಅಕಾಡೆಮಿ | 150.00 | 37.51 |
| | ಒಟ್ಟು ರೂ. | **92425.54** | **23106.39** |

**ಷರತ್ತುಗಳು:**

1. ಕ್ಷೇತ್ರೀಯ ಇಲಾಖೆಗಳು ಯಾವುದೇ ಯೋಜನೆಯಡಿ ಹಣ ಮರು ಬಿಡುಗಡೆ ಮಾಡುವಾಗ ಭಾರತ ಚುನಾವಣಾ ಆಯೋಗವು ಹೊರಡಿಸಿರುವ ಮಾದರಿ ನೀತಿ ಸಂಹಿತೆ ಮಾರ್ಗ ಸೂಚಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

.......5

S.A

Scanned with OKEN Scanner

2. ಮೇಲ್ಕಂಡ ವೆಚ್ಚವನ್ನು 2024-25ನೇ ಸಾಲಿನಲ್ಲಿ ಆಯಾ ಲೆಕ್ಕಶೀರ್ಷಿಕೆಗಳಲ್ಲಿ ಒದಗಿಸಿದ ಅನುದಾನದಲ್ಲಿಯೇ ಭರಿಸತಕ್ಕದ್ದು. ಯೋಜನಾ ವೆಚ್ಚಗಳ ಬಗ್ಗೆ ಕಟ್ಟುನಿಟ್ಟಾಗಿ ಮಾಸಿಕ ಮತ್ತು ತ್ರೈಮಾಸಿಕ (ಎಂಪಿಕ್) ವೆಚ್ಚಗಳ ವಿವರಣಾ ಪತ್ರದಲ್ಲಿದ್ದಂತೆ ವೆಚ್ಚವನ್ನು ಮಾಡಬೇಕು. ಯಾವುದೇ ಪರಿಸ್ಥಿತಿಯಲ್ಲಿ ಸರ್ಕಾರದ ಒಪ್ಪಿಗೆ ಪಡೆಯದೆ ವೆಚ್ಚದ ಮಿತಿಯನ್ನು ಮೀರಬಾರದು.
3. ಸರ್ಕಾರವು ಮರುಹೊಂದಾಣಿಕೆಗೆ ಮಂಜೂರಾತಿ ನೀಡದ ಹೊರತು ಯಾವುದೇ ಘಟಕದಲ್ಲಿ ಉಳಿತಾಯದಿಂದ ಮರುಹೊಂದಾಣಿಕೆಯನ್ನು ನಿರೀಕ್ಷಿಸಿ ಅಧಿಕ ವೆಚ್ಚವನ್ನು ಮಾಡಬಾರದು.
4. ಹೊಸ ಸೇವೆ ಬಾಬ್ತಿನ ಸಂಬಂಧದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 10 ಬಿಯೂಡಿ 84, ದಿನಾಂಕ:14.10.1987 ರಲ್ಲಿ ಪರಿಷ್ಕರಿಸಿದ ನಿಯಮಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಹೊಸ ಸೇವೆಗಳ ಬಗ್ಗೆ ಸಾದಿಲ್ವಾರು ನಿಧಿಯಿಂದ ಅಥವಾ ಪೂರಕ ಅಂದಾಜಿನ ಮೂಲಕ ಆರ್ಥಿಕ ಇಲಾಖೆಯು ಹಣ ಬಿಡುಗಡೆ ಮಾಡದ ಹೊರತು ಯಾವುದೇ ವೆಚ್ಚವನ್ನು ಮಾಡಬಾರದು.
5. ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದ ಆಯವ್ಯಯ ಅನುದಾನಗಳು ಸಂಬಂಧಪಟ್ಟ ಅನುದಾನ ಅಭಿಯಾಚನೆಯಲ್ಲಿ ಸೇರಿರುತ್ತವೆ. ಅಭಿಯಾಚನೆಗಳಲ್ಲಿ ಸೃಜಿಸಿರುವ ಮೊತ್ತಕ್ಕಿಂತ ವೆಚ್ಚವು ಅಧಿಕವಾಗಿಲ್ಲವೆಂದು ಖಾತ್ರಿಮಾಡಿಕೊಳ್ಳುವ ಜವಾಬ್ದಾರಿಯು ಇಲಾಖಾ ಮುಖ್ಯಸ್ಥರದೇ ಆಗಿರುತ್ತದೆ. ಇವರು ಜಿಲ್ಲಾ ಪಂಚಾಯತ್‌ನ ಕ್ಷೇತ್ರ ಇಲಾಖೆಯಿಂದ ಮಾಸಿಕ ವರದಿಯನ್ನು ಪಡೆದುಕೊಂಡು ವೆಚ್ಚವನ್ನು ನಿಯಂತ್ರಿಸಬೇಕು.
6. ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಡಿ ಡಿಡಿಒ (ಹಣ ಸೆಳೆಯುವ ಮತ್ತು ಬಟವಾಡೆ) ಕೋಡ್ ಒಳಗೊಂಡಿಲ್ಲದ ಕ್ಷೇತ್ರ ಇಲಾಖೆಗಳು ಬಿಡುಗಡೆ ಮಾಡಬೇಕಾದ ಆಯವ್ಯಯದಲ್ಲಿನ ಅನುದಾನಗಳಿಗೆ ಸಂಬಂಧಪಟ್ಟ ಹಣ ಪಡೆಯುವ/ ಬಟವಾಡೆ ಅಧಿಕಾರಿಗಳು ಸಲ್ಲಿಸುವ ಬಿಲ್ಲುಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಗಳ ಮೇಲುರುಜು ಹಾಗೂ ಟೋಕನ್‌ಗಳಿಗೆ ಸಹಿ ಪಡೆದುಕೊಳ್ಳುವುದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 02 ಟಿಎಫ್‌ಪಿ 2024, ದಿನಾಂಕ:01-04-2024 ರನ್ವಯ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ

ಗೆ,

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.

.......6

S.A

Scanned with OKEN Scanner

3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
4. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
6. ರಿಜಿಸ್ಟ್ರಾರ್, ಕರ್ನಾಟಕ ಉರ್ದು ಅಕಾಡೆಮಿ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು (ನಿರ್ದೇಶಕರ ಮುಖಾಂತರ)
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
10. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ನಿರ್ದೇಶಕರ ಮುಖಾಂತರ).
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, (ನಿರ್ದೇಶಕರ ಮುಖಾಂತರ).
12. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ 3 & 9) 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
4. ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ (24X7), ವಸಂತನಗರ, ಬೆಂಗಳೂರು.

~~~~~~~~***~~~~~~

Scanned with OKEN Scanner
~~~~~~~~